
# ನಿಮ್ಮೊಡನೆ

ಮಹಿಳೆಯರಿಗೆ ಶೇಕಡಾ 33ರಷ್ಟು ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂದು ಪ್ರತಿಪಾದಿಸುವ ರಾಜಕೀಯ ಪಕ್ಷಗಳೆಲ್ಲವೂ ಮಹಿಳೆಯರಿಗೆ ಟಿಕೆಟ್ ನೀಡುವಂತಹ ಸಂದರ್ಭ ಬಂದಾಗ ಮಾತ್ರ ಏನೇನೋ ನೆಪ ಹೇಳುತ್ತವೆ. ಟಿಕೆಟ್ ನೀಡುವ ವಿಚಾರದಲ್ಲಿ, ಈವರೆಗೆ ಯಾವ ರಾಜಕೀಯ ಪಕ್ಷವೂ ಶೇಕಡಾ 10ರ ಗಡಿ ದಾಟಿಲ್ಲ. ಈ ಬಾರಿಯೂ ಅದೇ ಆಗಿದೆ. ಮಹಿಳಾ ಪ್ರಾತಿನಿಧ್ಯವನ್ನು ಅಂಚಿಗೆ ಸರಿಸುತ್ತಿರುವ ಹುನ್ನಾರವನ್ನು ಮಹಿಳೆಯರು ಅರ್ಥ ಮಾಡಿಕೊಳ್ಳಬೇಕಾಗಿದೆ.




## ಮಹಿಳಾ ಮತ ಶಕ್ತಿ

ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗೆ ಕ್ಷಣಗಣನೆ ಶುರುವಾಗಿದೆ. ಹಾಗೆಯೇ ಲೋಕಸಭಾ ಚುನಾವಣೆಗೂ ರಾಷ್ಟ್ರ ಸನ್ನದ್ಧವಾಗುತ್ತಿದೆ. ಮೇ 5ರಂದು ನಡೆಯಲಿರುವ ರಾಜ್ಯವಿಧಾನಸಭಾ ಚುನಾವಣೆಯಲ್ಲಿ 2,13,52,916 ಮಹಿಳೆಯರು ಮತ ಚಲಾಯಿಸಲಿದ್ದಾರೆ. ಪುರುಷ ಮತದಾರರ ಪ್ರಮಾಣ 2,22,84,050. ಎಂದರೆ ಸರಿ ಸುಮಾರು ಅರ್ಧದಷ್ಟಿರುವ ಮಹಿಳಾ ಮತದಾರರಿಗೆ ಈ ಚುನಾವಣೆ ಧ್ವನಿಸುವುದಾದರೂ ಏನು?

ಕಳೆದ ಬಾರಿ ರಾಜ್ಯದ 13ನೇ ವಿಧಾನಸಭೆ ರಚನೆಯಾದಾಗ ಶಾಸಕಿಯರಾದವರು ಕೇವಲ ಮೂರೇ ಮಂದಿ. ಅಂದರೆ 224 ಸದಸ್ಯಬಲದ ವಿಧಾನಸಭೆಯಲ್ಲಿ ಈ ಪ್ರಮಾಣ ಕೇವಲ ಶೇ 1.34. ಈಗ ಮತ್ತೆ ಅದೇ 224 ಸದಸ್ಯ ಬಲದ 14ನೇ ವಿಧಾನಸಭೆ ಚುನಾವಣೆಗೆ ಕಣದಲ್ಲಿರುವ ಅಭ್ಯರ್ಥಿಗಳ ಸಂಖ್ಯೆ 2948. ಈ ಪೈಕಿ ಕೇವಲ 170 ಮಂದಿ ಮಾತ್ರ ಮಹಿಳೆಯರು. ಮಹಿಳೆಯರಿಗೆ ಶೇಕಡಾ 33ರಷ್ಟು ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂದು ಪ್ರಬಲವಾಗಿ ಪ್ರತಿಪಾದಿಸುವ ರಾಜಕೀಯ ಪಕ್ಷಗಳೆಲ್ಲವೂ ಮಹಿಳೆಯರಿಗೆ ಟಿಕೆಟ್ ನೀಡುವಂತಹ ಸಂದರ್ಭ ಬಂದಾಗ ಮಾತ್ರ ಏನೇನೋ ನೆಪ ಹೇಳುತ್ತವೆ. ಮಹಿಳೆಗೆ ಟಿಕೆಟ್ ನೀಡುವ ವಿಚಾರದಲ್ಲಿ, ಈವರೆಗೆ ಯಾವ ರಾಜಕೀಯ ಪಕ್ಷವೂ ಶೇಕಡಾ 10ರ ಗಡಿ ದಾಟಿಲ್ಲ. ಈ ಬಾರಿಯೂ ಅದೇ ಆಗಿದೆ. ಮಹಿಳಾ ಪ್ರಾತಿನಿಧ್ಯವನ್ನು ಅಂಚಿಗೆ ಸರಿಸುತ್ತಿರುವ ಈ ರಾಜಕೀಯದಾಟವನ್ನು ಮಹಿಳಾ ಮತದಾರರು ಅರ್ಥ ಮಾಡಿಕೊಳ್ಳಬೇಕಾಗಿದೆ.

2012ರ ಅಮೆರಿಕದ ಅಧ್ಯಕ್ಷ ಚುನಾವಣೆಯಲ್ಲಿ ಮಹಿಳಾ ಮತದಾರರು ಐತಿಹಾಸಿಕವಾದ ಒಂದು ಸ್ಪಷ್ಟ ಸಂದೇಶ ಸಾರಿದ್ದರೆಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ಬರಾಕ್ ಒಬಾಮ ಅವರನ್ನು ಎರಡನೇ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಚುನಾಯಿಸುವಲ್ಲಿ ಮಹಿಳೆಯರ ಮತಗಳು ನಿರ್ಣಾಯಕವಾಗಿದ್ದವು. ನಿರಂತರ ಹೋರಾಟಗಳಿಂದ ಗಳಿಸಿಕೊಂಡ ಪ್ರಜನನ ಮತ್ತಿತರ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡಲು ಯತ್ನಿಸುವಂತಹ ಅಮೆರಿಕದ ಸಂಪ್ರದಾಯಶೀಲ ರಾಜಕಾರಣಿಗಳಿಗೆ ತಮ್ಮ ಬೆಂಬಲ ಇಲ್ಲ ಎಂಬುದನ್ನು ಮಹಿಳಾ ಮತದಾರರು ಸ್ಪಷ್ಟವಾಗಿ ಸಾರಿದ್ದರು. ಜೊತೆಗೆ ದಾಖಲೆ ಸಂಖ್ಯೆಯಲ್ಲಿ ಮಹಿಳೆಯರು ಮತದಾನದಲ್ಲಿ ಭಾಗವಹಿಸಿದ್ದರು.

ನಮ್ಮ ರಾಷ್ಟ್ರದಲ್ಲೂ ಕಳೆದ ವರ್ಷ ನಡೆದ ಅನೇಕ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮತದಾನ ಮಾಡಿದ್ದರು ಎಂಬುದು ವಿಶೇಷ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ, ಮಹಿಳಾ ಕೇಂದ್ರಿತ ಅಭಿವೃದ್ಧಿ ಕಾರ್ಯಕ್ರಮಗಳು ಈ ಬೆಳವಣಿಗೆಗೆ ತಮ್ಮದೇ ಕೊಡುಗೆ ಸಲ್ಲಿಸಿವೆ. ಮತದಾರ ಚೀಟಿ ವಿತರಣೆಯಲ್ಲದೆ, ಅಕ್ರಮ, ಹಿಂಸೆಗಳ ತಡೆಗೆ ಚುನಾವಣಾ ಆಯೋಗ ಕೈಗೊಂಡ ಕ್ರಮಗಳಿಂದಾಗಿ ಮತಗಟ್ಟೆಗೆ ಬಂದು ಮತ ಹಾಕಲು ಮಹಿಳಾ ಮತದಾರರಲ್ಲಿನ ವಿಶ್ವಾಸ ವೃದ್ಧಿಯಾಗಿತ್ತು ಎಂದು ವರದಿಗಳು ಹೇಳಿದ್ದವು.

ಹೀಗಾಗಿ ಈ ಬಾರಿಯೂ ಮಹಿಳಾ ಮತದ ಶಕ್ತಿ ಏನೆಂಬುದನ್ನು ಮಹಿಳೆಯರು ತೋರಿಸಬೇಕಾಗಿದೆ. ಮಹಿಳೆಯರ ಹಿತ ಕಡೆಗಣಿಸಲಾಗದು ಎಂಬುದು ರಾಜಕೀಯ ಪಕ್ಷಗಳಿಗೆ ಮನವರಿಕೆಯಾಗಬೇಕು. ವಾಸ್ತವವಾಗಿ ಮಹಿಳಾ ಮತ ಎಂಬುದು ಪ್ರತ್ಯೇಕ ಅಸ್ತಿತ್ವವಾಗಿ 1984ರ ಲೋಕಸಭಾ ಚುನಾವಣೆ ವೇಳೆಯಿಂದಲೇ ನಮ್ಮಲ್ಲಿ ಗೋಚರಕ್ಕೆ ಬಂದಿದೆ. ಆಗ ಇಂದಿರಾಗಾಂಧಿಯವರ ಹತ್ಯೆ ಬೀಸಿದ ಅನುಕಂಪದ ಅಲೆ ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನದಲ್ಲಿ ಪಾಲ್ಗೊಳ್ಳುವಂತೆ ಮಾಡಿತ್ತು. ಮನೆಯವರು ಹೇಳಿದಂತೆ ಮತ ಚಲಾಯಿಸುವ ಪ್ರವೃತ್ತಿ ಮಹಿಳೆಯರಲ್ಲಿ ಇನ್ನೂ ಇದ್ದರೂ ಅದನ್ನು ಮೀರಿ ಸ್ವಂತ ವಿವೇಚನೆಯಿಂದ ಮತ ಚಲಾಯಿಸುವ ಮಹಿಳೆಯರ ಪ್ರಮಾಣ ಹೆಚ್ಚುತ್ತಿದೆ ಎಂಬುದನ್ನು ಅಧ್ಯಯನಗಳು ತೋರಿಸಿವೆ. ಹೀಗಾಗಿಯೇ ನಮ್ಮ ರಾಜಕೀಯ ಪಕ್ಷಗಳು ಮಹಿಳಾ ಮತದಾರರನ್ನು ಓಲೈಸುವ ವಾಗ್ದಾನಗಳನ್ನು ತಮ್ಮ ಪ್ರಣಾಳಿಕೆಗಳಲ್ಲಿ ಘೋಷಿಸಿಕೊಂಡಿವೆ. ಆದರೆ ಅನುಗ್ರಹವೆಂಬಂತೆ ದಯಪಾಲಿಸಲಾಗುವ ಈ ಹುಸಿ ಪ್ರಣಾಳಿಕೆಗಳ ಮರ್ಮಗಳನ್ನು ಮಹಿಳೆಯರು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ನಿಜಕ್ಕೂ ಅಗತ್ಯವಾದ ಮಹಿಳೆಯರ ರಾಜಕೀಯ ನಾಯಕತ್ವ ಬೆಳೆಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲು ಈ ರಾಜಕೀಯ ಪಕ್ಷಗಳು ಸಿದ್ಧವಾಗುತ್ತಿಲ್ಲ.

ಮತದಾನ ಎಂಬುದು ಮಹಿಳೆಯ ಕೈಯಲ್ಲಿರುವ ಅಸ್ತ್ರ. ಮುಖ್ಯವಾಹಿನಿಯ ರಾಜಕೀಯದಲ್ಲಿ ಮತದಾರಳಾಗಿಯಷ್ಟೇ ಮಹಿಳೆ ಏಕೆ ಉಳಿಯಬೇಕು ಎಂಬ ಪ್ರಶ್ನೆಯನ್ನು ಮಹಿಳೆಯರು ಕೇಳಬೇಕು. ಇದಕ್ಕಾಗಿ ಮಹಿಳಾ ಮತ ಬ್ಯಾಂಕ್ ಎಂಬುದು ಪ್ರಭಾವಯುತ ಪ್ರತ್ಯೇಕ ಲಾಬಿಯಾಗಿ ರಾಜಕಾರಣದಲ್ಲಿ ತನ್ನ ಸ್ವರೂಪವನ್ನು ಸ್ಪಷ್ಟಗೊಳಿಸಿಕೊಳ್ಳುವತ್ತ ಹೆಜ್ಜೆ ಇರಿಸಬೇಕಾಗಿದೆ. ಇದು ಮಹಿಳಾ ನಾಯಕತ್ವ ಬೆಳವಣಿಗೆಗೆ ಸಹಕಾರಿಯಾಗಬಹುದು.

**- ಸಿ. ಜಿ. ಮಂಜುಳಾ**